ನಡೆದಳು ಕಮಲಾ.

ಮನು ಫೋನೆತ್ತಿಕೊಂಡು ಜಾಕೋಬರಿಗೆ ಫೋನ್ ಮಾಡಿ, ರೊಬೊ ಸುಂದರವಾಗಿಯೂ ಇದೆ ಮತ್ತು ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದ.

'ಇದು ಸ್ಪೆಷಲ್ ಡಿಸೈನಿನ ಮೊಟ್ಟ ಮೊದಲ ರೊಬೊ, ಇದರ ಬಗೆಗೆ ಆಗಾಗ್ಗೆ ನನಗೆ ಮಾಹಿತಿ ಒದಗಿಸುತ್ತಿರಿ, ಸ್ವಲ್ಪ ಎಚ್ಚರಿಕೆಯೂ ಇರಲಿ ಧನ್ಯವಾದಗಳು.'

ಜಾಕೋಬ್ ಮಾತು ಮನುವನ್ನು ಚಿಂತೆಗೀಡುಮಾಡಿತು.

'ಸ್ವಲ್ಪ ಎಚ್ಚರಿಕೆಯೂ ಇರಲಿ...' ಹಾಗೆಂದರೇನು? ರೊಬೊಗಳು ಹತ್ತಾರು ವರ್ಷಗಳಿಂದ ಜಗತ್ತಿನ ಎಲ್ಲೆಡೆ ಕೆಲಸದಲ್ಲಿ ತೊಡಗಿವೆ. ಯಾವ ರೊಬೊ ತಯಾರಕರೂ ತಮ್ಮ ರೊಬೊ ಬಗೆಗೆ ಎಚ್ಚರಿಕೆಯಿಂದಿರಿ ಎಂದು ಹೇಳಿಲ್ಲ. ಈ ರೊಬೊ ಬಗೆಗೆ ಇಂತಹ ಮಾತೇಕೆ? ಇದು ಮಾನವರನ್ನೂ ಮೀರಿಸಬಹುದು ಎಂಬ ಮಾತಿಗೂ ಜಾಕೋಬರ ಈ ಮಾತಿಗೂ ಏನಾದರೂ ಸಾಮ್ಯವಿದೆಯೆ? ಮನು ಯೋಚನೆಯಲ್ಲಿ ಮುಳುಗಿದ. ಹುಚ್ಚು ಕುದುರೆಯಂತೆ ಮನಸ್ಸು ಎತ್ತೆತ್ತಲೋ ಏನೇನೋ ಯೋಚಿಸುತ್ತಿತ್ತು. ಹಾಗೇ ಅದೆಷ್ಟು ಹೊತ್ತು ಕೂತಿದ್ದನೋ... ಸಮಯ ಸರಿದಿದ್ದೇ ಅರಿವಾಗಲಿಲ್ಲ.

'ವಿಶ್ವಾಮಿತ್ರರ ತಪಸ್ಸಿಗೆ ಭಂಗವಾಯಿತೇನೋ? ಪಾಪ, ನಿಮ್ಮ ಮೇನಕೆ ಊಟಕ್ಕೆ ಕರೆಯುತ್ತಿದ್ದಾಳೆ ಬನ್ನಿ.'

ಮಾದಕ ನಗೆ ಬೀರುತ್ತಾ ಎಚ್ಚರಿಸಿತು ಕಮಲಾ ರೊಬೊ!

'ಅಡಿಗಡಿಗೆ ಬೆಚ್ಚಿಬೀಳುವ ಅವಶ್ಯಕತೆಯಿಲ್ಲ. ನಾನು ನಿಮ್ಮ ಆಪ್ತ ಸಂಗಾತಿ. ನೀವು ನನ್ನನ್ನು ನೂರಕ್ಕೆ ಇನ್ನೂರು ಪಾಲು ನಂಬಬಹುದು. ದಯಮಾಡಿ ಈಗ ಊಟಕ್ಕೆ ಏಳಿ.'

'ನಡಿ ಕಮಲಾ...' ಮನು ಎದ್ದ.

'ದಟ್ ಇಸ್ ಲೈಕ್ ಎ ಗುಡ ಬಾಯ್.'

ಡೈನಿಂಗ್ ಟೇಬಲ್ ಮೇಲಿನ ತಿನಿಸುಗಳು ಪರಿಮಳ ಬೀರುತ್ತಿದ್ದವು; ರಸಪಾಕದಂತೆ ಕಾಣುತ್ತಿದ್ದವು.

ಮನು ಎದುರಿನಲ್ಲಿ ಕಮಲಾ ಕೂತಳು. ಮೊದಲು ಮನು ತಟ್ಟೆಗೆ ನಂತರ ತನ್ನ ತಟ್ಟೆಗೆ ಎಲ್ಲ ಖಾದ್ಯಗಳನ್ನೂ ನಾಜೂಕಾಗಿ, ಒಪ್ಪವಾಗಿ ಬಡಿಸಿದಳು. ಒಬ್ಬಳು ಸುಸಂಸ್ಕೃತ ಮನೆತನದ ಹೆಣ್ಣುಮಗಳಂತೆ ಅವಳ ವರ್ತನೆ ಕಾಣಿಸುತ್ತಿತ್ತು.

ಮೊದಲ ತುತ್ತು ಬಾಯಿಗಿಳಿಸುತ್ತಲೇ 'ವಾವ್' ಎಂದು ಉದ್ಗರಿಸಿಬಿಟ್ಟ ಮನು–ತನ್ನ ಅರಿವೇ ಇಲ್ಲದೆ.

'ಥ್ಯಾಂಕ್ಸ್' ನಾಜೂಕಾಗಿ ತಿನ್ನುತ್ತಿದ್ದ ಕಮಲಾ ಪ್ರತಿಕ್ರಿಯಿಸಿದಳು.

ಎಲ್ಲ ಮಾಯಾಬಜಾರಿನಂತೆ ಮನುಗೆ ಕಾಣಿಸುತ್ತಿತ್ತು. ಇದನ್ನು ನಂಬುವುದೋ ಬಿಡುವುದೋ?... ನಂಬಲಾರೆ, ನಂಬದಿರಲಾರೆ ಎನ್ನುವಂತಿತ್ತು ಅವನ ಸ್ಥಿತಿ. ತುತ್ತಿಗೊಮ್ಮೆ ಆನಂದಿಸುತ್ತಾ ಊಟ ಮುಂದುವರಿಸಿದ.

'ಇನ್ನೂ ಏನೇನು ಬರುತ್ತೆ ನಿನಗೆ?...'

'ಇಂಟರ್‌ನೆಟ್ಟಿನಲ್ಲಿ ಲಭ್ಯವಿರುವ ಎಲ್ಲ ಆಹಾರ ಪದಾರ್ಥಗಳನ್ನೂ ತಯಾರಿಸಬಲ್ಲೆ. ಇನ್ನೂ ಹೆಚ್ಚಿನದೇನಾದರೂ ಬೇಕಾದರೆ, ಅದರ ವಿವರ ಕೊಟ್ಟರೆ ಅದನ್ನೂ ಮಾಡಬಲ್ಲೆ...'

'ನೀನು ತಂತ್ರಜಗತ್ತಿನ ಅದ್ಭುತ.'